

## ಕರೀನಾ ಖುಷ್!

'ರಾ ಒನ್' ಚಿತ್ರ ಬಾಕ್ಸಾಫೀಸಿನಲ್ಲಿ ಗೆದ್ದಿದೆ. ಶಾರೂಕ್ ಖಾನ್ ಅಭಿಮಾನಿಗಳು ಖುಷಿಯಾಗಿದ್ದಾರೆ. ದೀಪಾವಳಿಯ ಹೊತ್ತಿಗೆ ಅಭಿಮಾನಿಗಳಿಗೆ ಮನರಂಜನೆಯ ರಸದೌತಣವೇ ಸಂದಿದೆ. ಆದರೆ ದಕ್ಷಿಣದ ಪ್ರೇಕ್ಷಕರು, 'ನಮ್ಮ ರಜನಿ ಸಾರ್ ಮಾಡಿದ ಎಂಧಿರನ್‌ಗೆ ಹೋಲಿಸಿದರೆ ರಾ ಒನ್ ಅಷ್ಟಕ್ಕಷ್ಟೆ' ಎನ್ನುತ್ತಿದ್ದಾರೆ. ಎಂಧಿರನ್‌ಗೆ ಹೋಲಿಕೆಯಾಗದಂತೆ ಶಾರೂಕ್ ತನ್ನ ಸಿನಿಮಾದಲ್ಲಿ ಕೊನೆಯ ಕ್ಷಣದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿದ್ದರೂ, ದಕ್ಷಿಣದ ಪ್ರೇಕ್ಷಕರನ್ನು ಯಾಮಾರಿಸಲು ಆಗಿಲ್ಲ.

'ರಾ ಒನ್' ಯಶಸ್ಸಿನಿಂದ ಕರೀನಾ ಉಬ್ಬಿಹೋಗಿದ್ದಾಳಂತೆ. ಸದ್ಯಕ್ಕಂತೂ ಬಾಲಿವುಡ್‌ನಲ್ಲಿ ಆಕೆಯನ್ನು ಮೀರಿಸುವ ಹೀರೋಯಿನ್‌ಗಳಿಲ್ಲ. ಕರೀನಾಗೆ ಸಖತ್ ಪೈಪೋಟಿ ನೀಡುತ್ತಿದ್ದ ಕತ್ರೀನಾ ಮತ್ತು ಪ್ರಿಯಾಂಕಾ ಇಬ್ಬರೂ ಸದ್ಯಕ್ಕೆ ಮಂಕಾಗಿ ಕಾಣುತ್ತಿದ್ದಾರೆ. ಕರೀನಾ ಈಗ ಬಾಲಿವುಡ್‌ನ 'ನಂಬರ್ ಒನ್' ತಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಈ ಮಧ್ಯೆ ಕರೀನಾಳ ಮೇಣದ ಪ್ರತಿಕೃತಿಯೊಂದು ಲಂಡನ್ನಿನ ಮೇಡಂ ಟುಸ್ಸಾದ್ ಗ್ಯಾಲರಿಯಲ್ಲಿ ಪ್ರತಿಷ್ಠಾಪನೆ ಆಗಲಿದೆಯಂತೆ. ಈಗಾಗಲೆ ಬಾಲಿವುಡ್‌ನ ಭಾರೀ ತಾರೆಯರಾದ ಅಮಿತಾಭ್ ಬಚ್ಚನ್, ಶಾರೂಕ್ ಖಾನ್ ಮತ್ತು ಐಶ್ವರ್ಯ ರೈಯವರ ಮೇಣದ ಪ್ರತಿಕೃತಿ ಅಲ್ಲಿ ಸ್ಥಾಪನೆಯಾಗಿದೆ. ಅದರ ಜತೆಗೆ ಕರೀನಾಳದ್ದೂ ಸೇರಿದ್ದರಿಂದ ಆಕೆಯೀಗ ಅಂತರರಾಷ್ಟ್ರೀಯ ತಾರೆ ಎನ್ನಲಡ್ಡಿಯಿಲ್ಲ.

ಆದರೆ ಅಮಿತಾಭ್, ಶಾರೂಕ್, ಐಶ್‌ಗಿಂತಲೂ ಒಂದು ಹೆಜ್ಜೆ ಮುಂದೆ ಇಟ್ಟಿದ್ದಾಳೆ ಕರೀನಾ– ಎನ್ನುವುದು ಕುತೂಹಲಕರ. ಏಕೆಂದರೆ ಕರೀನಾಳ ಮೇಣದ ಪ್ರತಿಕೃತಿಯನ್ನು ಲಂಡನ್ ಮಾತ್ರವಲ್ಲ, ಜಗತ್ತಿನ ಇನ್ನೂ ಐದು ನಗರಗಳಲ್ಲಿ ಸ್ಥಾಪಿಸಲಾಗುವುದಂತೆ!

## ಸುಶ್ಮಿತಾ ಇನ್ ಲವ್?



ಬಾಯ್‌ಫ್ರೆಂಡ್‌ಗಳ ಬಗ್ಗೆ ಅತ್ಯಂತ ಉದಾರ ಧೋರಣೆ ತಳೆದಿರುವಾಕೆ ಸುಶ್ಮಿತಾ ಸೇನ್. ಬಾಯ್‌ಫ್ರೆಂಡ್‌ಗಳನ್ನು ಬದಲಾಯಿಸುವುದರಲ್ಲಿ ಆಕೆ ಎಕ್ಸ್‌ಪರ್ಟ್ ಕೂಡಾ. ಈಗ ಸುಶ್‌ಗೆ ಹೊಸ ಬಾಯ್‌ಫ್ರೆಂಡ್ ಸಿಕ್ಕಿದ್ದಾನಂತೆ. ಅದೂ ಆತ 22ರ ಹರೆಯದ ತರುಣನಂತೆ. ಸಾಕುತಾಯಿಯಾಗಿ ಮಗುವಿನ ಆರೈಕೆಯಲ್ಲಿ ಬ್ಯುಸಿಯಾಗಿದ್ದ ಸುಶ್, ಅದ್ಯಾವಾಗ ಈತನ ಗೆಳೆತನ ಮಾಡಿಕೊಂಡಳೋ ಗೊತ್ತಿಲ್ಲ! ಈ ಹೊಸ ಹುಡುಗನ ಹೆಸರು ಇಮ್ತಿಯಾಜ್ ಅಂತೆ. ಆತನ ಹೊಸ ರೋಲ್ಸ್ ರಾಯ್ಸ್ ಕಾರಿನಲ್ಲಿ ಸುಶ್ ಖುಷಿಯಿಂದ ಆದರೆ ಗುಟ್ಟಾಗಿ ಓಡಾಡುವುದನ್ನು ನೋಡಿದವರು ಅಷ್ಟೇ ಗುಟ್ಟಾಗಿ ಸುದ್ದಿ ಮಾಡಿದ್ದಾರೆ. ಎಷ್ಟು ಸತ್ಯವೋ ಗೊತ್ತಿಲ್ಲ; ಸುಶ್ ಬೇಬಿಯೇ ಹೇಳಬೇಕು.

■ ಬಿಂದು

